ದಿನಾಂಕ 06-06-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ - ವಾದಿಯರ ಪರ ಶ್ರೀ ಎಸ್.ಆರ್.ಪಿ., ವಕೀಲರಿಂದಃ**

ನಾನು ಸಹಿ ಮಾಡಿರುವ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಅದರಲ್ಲಿರುವ ವಿಷಯಗಳು ಸರಿ ಇವೆ ಮತ್ತು ಇವು ನನ್ನ ಹೇಳಿಕೆಯ ಮೇರೆಗೆ ತಯಾರಿಸಲಾಗಿದೆ. ನಾನು ನನ್ನ ವಾದ ಪತ್ರದ ಜೊತೆ ಕೆಲವು ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನೋಡಿ ಗುರುತಿಸುತ್ತೇನೆ. ಸದರಿ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನೆಗೊಳಪಡಿಸಲಾಯಿತು.

| | |
|---|---|
| ನಿಪಿ-1 | ಸರ್ವೆ ನಂಬ್ರ 479/1 ರ ಪಹಣಿ ಪತ್ರಿಕೆ, |
| ನಿಪಿ-2 | ಸರ್ವೆ ನಂಬ್ರ 479/9 ರ ಪಹಣಿ ಪತ್ರಿಕೆ, |
| ನಿಪಿ-3 | ಆಧಾರ್ ಕಾರ್ಡಿನ ಪ್ರತಿ, |
| ನಿಪಿ-4 | ಕ್ರಯ ಪತ್ರದ ದೃಢೀಕೃತ ನಕಲು, |
| ನಿಪಿ-5 | ನನ್ನ ಹಳೇಯ ಪಾಸ್ ಪೋರ್ಟ್ ನ ಪ್ರತಿ, |
| ನಿಪಿ-6 | ನನ್ನ ಇತ್ತೀಚಿನ ಹೊಸ ಪಾಸ್ ಪೋರ್ಟ್ ನ ಪ್ರತಿ,<br>(ಅಸಲು ಪಾಸ್ ಪೋರ್ಟನ್ನು ಹಾಜರುಪಡಿಸಿದ್ದು, ಅದನ್ನು ನೋಟರೀಕೃತ ಪಾಸ್ ಪೋಟಗೆ ತಾಳೆಮಾಡಿ ನೋಡಲಾಗಿ ಅದು ಒಂದೇ ರೀತಿಯದ್ದಾಗಿರುತ್ತದೆ ಮತ್ತು ಸರಿ ಇರುತ್ತದೆ ಮತ್ತು ಆ ಕಾರಣ ಅಸಲು ಪಾಸ್ ಪೋರ್ಟನ್ನು ವಾಪಾಸು ಕೊಡಲಾಗಿದೆ.) |
| ನಿಪಿ-7 | ಸೆಟ್ಲ್ಮೆಂಟ್ ಡೀಡಿನ ಪ್ರತಿ. |

ಆದುದರಿಂದ ದಾವೆಯನ್ನು ಪುರಸ್ಕರಿಸಬೇಕಾಗಿ ಕೋರಿಕೆ.

**ಈ ಹಂತದಲ್ಲಿ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸ. ಇದೆ ಎಂದು ಒಪ್ಪಿದರು

ಪ್ರ.ಹಿ.ಸಿ.ನ್ಯಾ., ಉಡುಪಿ.